ದಿನಾಂಕಃ 19.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ 1 ರಿಂದ 12ನೇ ಪ್ರತಿವಾದಿಯರ ಪರ ಶ್ರೀ. ಎನ್. ಎಸ್ ಬಿ ವಕೀಲರಿಂದಃ**

ಮೃತ 1 ನೇ ವಾದಿ ಹಾಗೂ ನನ್ನ ತಂದೆ ಮೃತ ಸಂತ್ರಾಮರವರು ನಮ್ಮ ಕುಟುಂಬದ ಅಡಚಣೆಗಾಗಿ ರಿ ಸ ನಂಬರ 85/26 ರ ಪೈಕಿ ಗ್ರಾಮ ಪಂಚಾಯತಿ ನಂಬರ 1037 ರ ಪೈಕಿ ಕ್ಷೇತ್ರ 65 ಅಡಿ X 18 ಅಡಿ ಜಾಗವನ್ನು ದಿನಾಂಕ 12.05.1987 ರಂದು ರೂ. 1000/- ಗಳಿಗೆ ಗಿರೆಪ್ಪ ಬಸಪ್ಪ ಜೋಣಿ ರವರಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಅದೇ ದಿನ ಸದರಿ ಜಾಗೆಯ ಕಬ್ಜೆಯನ್ನು ಅವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಪತ್ರದ ಪ್ರಕಾರ ಸದರೀರವರ ಹೆಸರು ಗ್ರಾಮ ಪಂಚಾಯತಿ ದಾಖಲೆಗಳಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದಂತೆ ದಾಖಲಾಗಿರುತ್ತದೆಂದರೆ ಸರಿಯಲ್ಲ. ಸದರೀರವರು ಸನ್ 2001 ರವರೆಗೆ ಮೆಲೆ ಹೇಳಿದ ಆಸ್ತಿಯಲ್ಲಿ ಕಬ್ಜೆಯಲ್ಲಿ ಇದ್ದರು ಎಂದರೆ ಸಾಕ್ಷಿಯು ನಾವು ಕಬ್ಜೆಯಲ್ಲಿದ್ದೆವು ಎಂದು ನುಡಿಯುತ್ತಾರೆ. ಸದರೀ ಗಿರೆಪ್ಪ ಬಸಪ್ಪ ಜೋಣಿರವರನ್ನು ಸದರಿ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ನಿಜ. ಅವರನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರುವುದಿಲ್ಲ ಎಂದರೆ ನಿಜ. ಸದರಿ ಗಿರೆಪ್ಪ ಬಸಪ್ಪ ಜೋಣಿರವರು ತಮ್ಮ ಪ್ರಪಂಚದ ಅಡಚಣ ಸಲುವಾಗಿ ಮೇಲೆ ಹೇಳಿದ ಆಸ್ತಿಯನ್ನು 8 ನೇ ಪ್ರತಿವಾದಿಗೆ ಸನ್ 2001 ರಲ್ಲಿ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅದೇ ದಿನ ಸದರಿ ಆಸ್ತಿಯ ಕಬ್ಜೆಯನ್ನು ಸಹ 8 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅಂದಿನಿಂದ ಸದರೀ ಆಸ್ತಿಯು 8 ನೇ ಪ್ರತಿವಾದಿಯು ಕಬ್ಜೆಯಲ್ಲಿರುತ್ತದೆಂದರೆ ಸರಿಯಲ್ಲ. ಸದರೀ ಖರೀದಿ ಪತ್ರದ ಪ್ರಕಾರ 8ನೇ

ಪ್ರತಿವಾದಿಯ ಹೆಸರು ಗ್ರಾಮ ಪಂಚಾಯತಿಯ ದಾಖಲೆಗಳಲ್ಲಿ ದಾಖಲಾಗಿರುತ್ತದೆಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ 8 ನೇ ಪ್ರತಿವಾದಿಯು ಸದರಿ ಆಸ್ತಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗೆ ಕರ ಪಾವತಿ ಮಾಡುತ್ತಾ ಬಂದಿರುತ್ತಾರೆಂದರೆ ಸರಿಯಲ್ಲ. ಸದರಿ ಎಲ್ಲಾ ಸಂಗತಿಗಳು ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮೃತ 1 ನೇ ವಾದಿ ಹಾಗೂ ನನ್ನ ತಂದೆ ಮೃತ ಸಂತ್ರಾಮರವರು ನಮ್ಮ ಕುಟುಂಬದ ಅಡಚಣೆಗಾಗಿ ರಿ. ಸ .ನಂಬರ 85/26 ರ ಪೈಕಿ ಗ್ರಾಮ ಪಂಚಾಯತಿ ನಂಬರ 1037 ರ ಪೈಕಿ ಕ್ಷೇತ್ರ 65 ಅಡಿ X 18 ಅಡಿ ಜಾಗವನ್ನು ದಿನಾಂಕ 13.08.1990 ರಂದು ರೂ. 1000/- ಗಳಿಗೆ 9 ನೇ ಪ್ರತಿವಾದಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಅದೇ ದಿನ ಸದರಿ ಜಾಗೆಯ ಕಬ್ಜೆಯನ್ನು ಅವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಪತ್ರದ ಪ್ರಕಾರ ಸದರೀರವರ ಹೆಸರು ಗ್ರಾಮ ಪಂಚಾಯತಿ ದಾಖಲೆಗಳಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದಂತೆ ದಾಖಲಾಗಿರುತ್ತದೆಂದರೆ ಸರಿಯಲ್ಲ. 9 ನೇ ಪ್ರತಿವಾದಿ ಅಂದಿನಿಂದ ಇವತ್ತಿನವರೆಗೂ ಮಾಲ್ಕೀ ನಾತೆಯಿಂದ ಸದರಿ ಆಸ್ತಿಯ ಕಬ್ಜಾ ವಹಿವಾಟಿಯಲ್ಲಿದ್ದು, ಗ್ರಾಮ ಪಂಚಾಯತಿಗೆ ಕರ ಪಾವತಿ ಮಾಡುತ್ತಾ ಬಂದಿರುತ್ತಾನೆಂದರೆ ಸರಿಯಲ್ಲ. ಸದರೀ ಎಲ್ಲಾ ಸಂಗತಿಗಳು ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮೃತ 1 ನೇ ವಾದಿ ಹಾಗೂ ನನ್ನ ತಂದೆ ಮೃತ ಸಂತ್ರಾಮರವರು ನಮ್ಮ ಕುಟುಂಬದ ಅಡಚಣೆಗಾಗಿ ರಿ. ಸ .ನಂಬರ 85/26 ರ ಪೈಕಿ ಗ್ರಾಮ ಪಂಚಾಯತಿ

ನಂಬರ 1037 ರ ಪೈಕಿ ಕ್ಷೇತ್ರ 65 ಅಡಿ X 18 ಅಡಿ ಜಾಗವನ್ನು ದಿನಾಂಕ 12.05.1987 ರಂದು ರೂ. 1000/- ಗಳಿಗೆ 10 ನೇ ಪ್ರತಿವಾದಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಅದೇ ದಿನ ಸದರಿ ಜಾಗೆಯ ಕಬ್ಜೆಯನ್ನು ಅವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಪತ್ರದ ಪ್ರಕಾರ ಸದರೀರವರ ಹೆಸರು ಗ್ರಾಮ ಪಂಚಾಯತಿ ದಾಖಲೆಗಳಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದಂತೆ ದಾಖಲಾಗಿರುತ್ತದೆಂದರೆ ಸರಿಯಲ್ಲ. ಆ ಪ್ರಕಾರ 10 ನೇ ಪ್ರತಿವಾದಿ ಮಾಲ್ಕೀ ನಾತೆಯಿಂದ ಸದರಿ ಆಸ್ತಿಯ ಕಬ್ಜಾ ವಹಿವಾಟಿಯಲ್ಲಿರುತ್ತಾನೆಂದರೆ ಸರಿಯಲ್ಲ. ಸದರೀರವರು ತಮಗೆ ವಯಸ್ಸಾಗಿದ್ದರಿಂದ ತನ್ನ ಮಗಳಾದ ರತ್ನವ್ವ ಹನಮಂತ ವಗ್ಗನವರವರಿಗೆ ಸದರೀ ಆಸ್ತಿಯನ್ನು ಬಿಟ್ಟು ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸದರೀ ಆಸ್ತಿಯು ಪ್ರಸ್ತುತ ಆಸ್ತಿ ನಂಬರ 1037/5 ಎಂದು ಸದರೀ ರತ್ನವ್ವಳ ಹೆಸರಿನಲ್ಲಿ ದಾಖಲು ಇರುತ್ತದೆಂದರೆ ಸರಿಯಲ್ಲ. ಅಂದಿನಿಂದ ಸದರೀ ರತ್ನವ್ವಳು ಸದರೀ ಆಸ್ತಿಗೆ ಮಾಲೀಕ ನಾತೆಯಿಂದ ಕಬ್ಜಾ ವಹಿವಾಟಿಯಲ್ಲಿದ್ದು, ಗ್ರಾಮ ಪಂಚಾಯತಿಗೆ ಕರ ಪಾವತಿ ಮಾಡುತ್ತಾ ಬಂದಿರುತ್ತಾಳೆಂದರೆ ಸರಿಯಲ್ಲ. ಸದರೀ ಎಲ್ಲಾ ಸಂಗತಿಗಳು ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮೃತ 1 ನೇ ವಾದಿ ಹಾಗೂ ನನ್ನ ತಂದೆ ಮೃತ ಸಂತ್ರಾಮರವರು ನಮ್ಮ ಕುಟುಂಬದ ಅಡಚಣೆಗಾಗಿ ರಿ. ಸ .ನಂಬರ 85/26 ರ ಪೈಕಿ ಗ್ರಾಮ ಪಂಚಾಯತಿ ನಂಬರ 1037 ರ ಪೈಕಿ ಕ್ಷೇತ್ರ 65 ಅಡಿ X 18 ಅಡಿ ಜಾಗವನ್ನು ದಿನಾಂಕ 12.05.1987 ರಂದು ರೂ. 1000/- ಗಳಿಗೆ 11 ನೇ ಪ್ರತಿವಾದಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಅದೇ ದಿನ

ಸದರಿ ಜಾಗೆಯ ಕಬ್ಜೆಯನ್ನು ಅವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಪತ್ರದ ಪ್ರಕಾರ ಸದರೀರವರ ಹೆಸರು ಗ್ರಾಮ ಪಂಚಾಯತಿ ದಾಖಲೆಗಳಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದಂತೆ ದಾಖಲಾಗಿರುತ್ತದೆಂದರೆ ಸರಿಯಲ್ಲ. 11 ನೇ ಪ್ರತಿವಾದಿ ಅಂದಿನಿಂದ ಇವತ್ತಿನವರೆಗೂ ಮಾಲ್ಕೀ ನಾತೆಯಿಂದ ಸದರಿ ಆಸ್ತಿಯ ಕಬ್ಜಾ ವಹಿವಾಟಿಯಲ್ಲಿದ್ದು, ಗ್ರಾಮ ಪಂಚಾಯತಿಗೆ ಕರ ಪಾವತಿ ಮಾಡುತ್ತಾ ಬಂದಿರುತ್ತಾನೆಂದರೆ ಸರಿಯಲ್ಲ. ಸದರೀ ಎಲ್ಲಾ ಸಂಗತಿಗಳು ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

12 ನೇ ಪ್ರತಿವಾದಿ ಅವ್ವಕ್ಕಳ ಗಂಡನ ಹೆಸರು ಲಕ್ಕಪ್ಪ ಅಂತರಗಟ್ಟಿ ಇರುತ್ತದೆಂದರೆ ನಿಜ. ಮೃತ 1ನೇ ವಾದಿ ಹಾಗೂ ನನ್ನ ತಂದೆ ಮೃತ ಸಂತ್ರಾಮರವರು ನಮ್ಮ ಕುಟುಂಬದ ಅಡಚಣೆಗಾಗಿ ರಿ. ಸ .ನಂಬರ 85/26 ರ ಪೈಕಿ ಗ್ರಾಮ ಪಂಚಾಯತಿ ನಂಬರ 1037 ರ ಪೈಕಿ ಕ್ಷೇತ್ರ 65 ಅಡಿ X 36 ಅಡಿ ಜಾಗವನ್ನು ದಿನಾಂಕ 12.05.1987 ರಂದು ರೂ. 2000/- ಗಳಿಗೆ 12 ನೇ ಪ್ರತಿವಾದಿಯ ಗಂಡನಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಅದೇ ದಿನ ಸದರಿ ಜಾಗೆಯ ಕಬ್ಜೆಯನ್ನು ಅವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಪತ್ರದ ಪ್ರಕಾರ ಸದರೀರವರ ಹೆಸರು ಗ್ರಾಮ ಪಂಚಾಯತಿ ದಾಖಲೆಗಳಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದಂತೆ ದಾಖಲಾಗಿರುತ್ತದೆಂದರೆ ಸರಿಯಲ್ಲ. ಅವರು ತೀರಿಕೊಂಡ ನಂತರ ವಾರಸಾ ನಾತೆಯಿಂದ 12 ನೇ ಪ್ರತಿವಾದಿಯ ಹೆಸರು ದಾಖಲಾಗಿರುತ್ತದೆಂದರೆ ಸರಿಯಲ್ಲ. ಸದರೀ ಖರೀದಿ ಪತ್ರ ಆದಾಗಿನಿಂದ ಅವರು ಇವತ್ತಿನವರೆಗೂ ಮಾಲ್ಕೀ ನಾತೆಯಿಂದ ಸದರಿ ಆಸ್ತಿಯ ಕಬ್ಜಾ ವಹಿವಾಟಿಯಲ್ಲಿದ್ದು, ಗ್ರಾಮ ಪಂಚಾಯತಿಗೆ ಕರ ಪಾವತಿ ಮಾಡುತ್ತಾ ಬಂದಿರುತ್ತಾರೆಂದರೆ ಸರಿಯಲ್ಲ. ಸದರೀ ಎಲ್ಲಾ ಸಂಗತಿಗಳು ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮೃತ 1 ನೇ ವಾದಿ ಹಾಗೂ ನನ್ನ ತಂದೆ ಮೃತ ಸಂತ್ರಾಮರವರು ನಮ್ಮ ಕುಟುಂಬದ ಅಡಚಣೆಗಾಗಿ ರಿ. ಸ .ನಂಬರ 85/26 ರ ಪೈಕಿ ಗ್ರಾಮ ಪಂಚಾಯತಿ ನಂಬರ 1037 ರ ಪೈಕಿ ಕ್ಷೇತ್ರ 65 ಅಡಿ X 36 ಅಡಿ ಜಾಗವನ್ನು ದಿನಾಂಕ 12.05.1987 ರಂದು ರೂ. 2000/- ಗಳಿಗೆ 1 ನೇ ಪ್ರತಿವಾದಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಅದೇ ದಿನ ಸದರಿ ಜಾಗೆಯ ಕಬ್ಜೆಯನ್ನು ಅವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಪತ್ರದ ಪ್ರಕಾರ ಸದರೀರವರ ಹೆಸರು ಗ್ರಾಮ ಪಂಚಾಯತಿ ದಾಖಲೆಗಳಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದಂತೆ ದಾಖಲಾಗಿರುತ್ತದೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಅಂದಿನಿಂದ ಇವತ್ತಿನವರೆಗೂ ಮಾಲ್ಕೀ ನಾತೆಯಿಂದ ಸದರಿ ಆಸ್ತಿಯ ಕಬ್ಜಾ ವಹಿವಾಟಿಯಲ್ಲಿದ್ದು, ಗ್ರಾಮ ಪಂಚಾಯತಿಗೆ ಕರ ಪಾವತಿ ಮಾಡುತ್ತಾ ಬಂದಿರುತ್ತಾನೆಂದರೆ ಸರಿಯಲ್ಲ. ಸದರೀ ಎಲ್ಲಾ ಸಂಗತಿಗಳು ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮೇಲೆ ಹೇಳಿದಂತೆ ಮೃತ 1 ನೇ ವಾದಿ ಹಾಗೂ ನನ್ನ ತಂದೆ ಮೃತ ಸಂತ್ರಾಮರವರು ನಮ್ಮ ಕುಟುಂಬದ ಅಡಚಣೆಗಾಗಿ ಸದರೀ ರಿ. ಸ .ನಂಬರ 85/26 ರ ಪೈಕಿ ಗ್ರಾಮ ಪಂಚಾಯತಿ ನಂಬರ 1037 ರ ಪೈಕಿ 1 ರಿಂದ 12 ನೇ ಪ್ರತಿವಾದಿಯರಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ನಿರ್ದಿಷ್ಟವಾದ ಚಕ್ಕುಬಂದಿಯೊಂದಿಗೆ ಮಾರಾಟ ಮಾಡಿದ್ದು, ಸದರೀರವರು ತಮ್ಮ ತಮ್ಮ ಜಾಗೆಯಲ್ಲಿ ಕಬ್ಜಾ ವಹಿವಾಟಿಯಲ್ಲಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರೀ ಮೇಲೆ ಹೇಳಿದ ಖರೀದಿ ಪತ್ರಗಳ ಮೂಲಕ ಸಂದಾಯ ಮಾಡಿದ ಹಣವು ನಮ್ಮ ಕುಟುಂಬದ ಅಡಚಣೆಗಾಗಿ ಉಪಯೋಗವಾಗಿರುತ್ತದೆಂದರೆ ಸರಿಯಲ್ಲ. ಸದರೀರವರು ತಮ್ಮ ತಮ್ಮ ಜಾಗೆಯಲ್ಲಿ ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ಮನೆಗಳನ್ನು ಕಟ್ಟಿಕೊಂಡಿರುತ್ತಾರೆಂದರೆ ಸಾಕ್ಷಿಯು ಮನೆಗಳನ್ನು ಕಟ್ಟಿಕೊಂಡ

ಮೇಲೆಯೇ ನಾವು ಸದರೀ ದಾವೆಯನ್ನು ಹೂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರೀ ಮೇಲೆ ಹೇಳಿದ ಪ್ರತಿವಾದಿಯರು ತಾಹಿವು ಖರೀದಿ ಪತ್ರದ ಮೂಲಕ ಜಾಗೆಯನ್ನು ಖರೀದಿಸಿದ ನಂತರ ಸನ್ 1987, ಸನ್ 1990 ಈ ರೀತಿಯಾಗಿ ತಮ್ಮ ಅನುಕೂಲಕ್ಕೆ ತಕ್ಕಂತೆ ಕಟ್ಟಿಕೊಂಡಿರುತ್ತಾರೆಂದರೆ ಸಾಕ್ಷಿಯು ನಮ್ಮ ಜಾಗೆಯನ್ನು ಕಸಿದುಕೊಂಡು ಮನೆಗಳನ್ನು ಕಟ್ಟಿಕೊಂಡಿದ್ದರಿಂದ ಪ್ರಸ್ತುತ ದಾವೆಯನ್ನು ಹಾಕಿರುತ್ತೇನೆಂದು ನುಡಿಯುತ್ತಾರೆ.

ಪ್ರತಿವಾದಿಯರು ಯಾವಾಗ ದಾವಾಸ್ತಿಗಳ ಕಬ್ಜೆಯನ್ನು ಕಸಿದುಕೊಂಡಿರುತ್ತಾರೆಂದರೆ ಸಾಕ್ಷಿಯು ಸನ್ 2021 ರಲ್ಲಿ ಕಸಿದುಕೊಂಡಿರುತ್ತಾರೆಂದು ನುಡಿಯುತ್ತಾರೆ. ಯಾವ ಪ್ರತಿವಾದಿಯು ಯಾವಾಗ ನಮ್ಮ ಕಬ್ಜೆಯನ್ನು ಬಿಡಿಸಿರುತ್ತಾರೆಂದರೆ ಸಾಕ್ಷಿಯು ಮೊದಲಿನಿಂದಲೂ ಅಂದರೆ 2-3 ವರ್ಷಗಳ ಕಾಲ ತಮ್ಮ ಟ್ರ್ಯಾಕ್ಟರ ನ್ನು ಸದರೀ ಜಾಗೆಗಳಲ್ಲಿ ನಿಲ್ಲಿಸುತ್ತಿದ್ದರು ಎಂದು ನುಡಿಯುತ್ತಾರೆ. ಆ ಬಗ್ಗೆ ನಾನು ತಕರಾರನ್ನು ಮಾಡಿರುತ್ತೇನೆ. ಆ ಕುರಿತು ನನ್ನ ಬಾಯಿ ಹೇಳಿಕೆಯನ್ನು ಬಿಟ್ಟು ಬೇರೆ ದಾಖಲೆಗಳು ಇರುವುದಿಲ್ಲ. ಸನ್ 2021 ರಲ್ಲಿ ಪ್ರತಿವಾದಿಯರು ನಮ್ಮ ಕಬ್ಜೆಯನ್ನು ಬಿಡಿಸಿದಕ್ಕೆ ಪಂಚಾಯತಿಯಲ್ಲಿ ಅರ್ಜಿಯನ್ನು ಕೊಟ್ಟಿರುತ್ತೇವೆ ಆದರೆ ಪೊಲೀಸ್ ಠಾಣೆಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ಪೊಲೀಸ್ ಠಾಣೆಗೆ ದೂರು ಕೊಡಲು ತೊಂದರೆ ಇರುವುದಿಲ್ಲ. ಪ್ರತಿವಾದಿಯರು ಸನ್ 2021 ರಲ್ಲಿ ನಮ್ಮ ಕಬ್ಜೆಯನ್ನು ಬಿಡಿಸಿರುತ್ತಾರೆ ಹಾಗೂ ಅದಕ್ಕಿಂತ ಮುಂಚೆ ಟ್ರ್ಯಾಕ್ಟರನ್ನು ನಿಲ್ಲಿಸುತ್ತಿದ್ದರು ಎಂದು ಕಟ್ಟು ಕಥೆಯನ್ನು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ರಿಂದ 12 ನೇ ಪ್ರತಿವಾದಿಯರು ತಾವು ಕಟ್ಟಿಕೊಂಡ ಮನೆಗಳಿಗೆ ವಿದ್ಯುತ್ ಸಂಪರ್ಕಗಳನ್ನು ಪಡೆದಿರುತ್ತಾರೆಂದರೆ ಸಾಕ್ಷಿಯು ತಮಗೆ ಅನುಕೂಲಕ್ಕೆ ತಕ್ಕಂತೆ

ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಅದೇ ರೀತಿ ಮನೆಗಳಿಗೆ ನೀರಿನ ಸೌಲಭ್ಯವನ್ನು ಪಂಚಾಯತಿಯಿಂದ ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ.

7 ನೇ ಪ್ರತಿವಾದಿಯು ಕಟ್ಟಿಕೊಂಡ ಮನೆಯು ಹಳೆಯದಾಗಿದ್ದು, ಅತೀ ಮಳೆಯಾದ ಕಾರಣದಿಂದ ಬಿದ್ದಿದ್ದರಿಂದ ಸರಕಾರದಿಂದ ಹೊಸ ಮನೆ ಮಂಜೂರಾಗಿರುತ್ತದೆಂದರೆ ಸರಿ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ಸಹ ನಾವು ತಕರಾರನ್ನು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸರಕಾರದವರು ಮನೆ ಮಂಜೂರು ಮಾಡಬೇಕಾದರೆ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡುತ್ತಾರೆಂದರೆ ನಿಜ. 7 ನೇ ಪ್ರತಿವಾದಿಯ ಖರೀದಿ ಪತ್ರ ಹಾಗೂ ಕಬ್ಜೆಯನ್ನು ದೃಢಪಡಿಸಿಕೊಂಡ ನಂತರ ಸರಕಾರದವರು ಮನೆಯನ್ನು ಮಂಜೂರು ಮಾಡಿರುತ್ತಾರೆಂದರೆ ನಿಜ. ಸಾಕ್ಷಿ ಮುಂದುವರೆದು ನಮ್ಮ ಹೊಲದಲ್ಲಿ ಮನೆ ಕಟ್ಟಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಸದರೀ ಮನೆಗೆ ಪಂಚಾಯತಿಯವರು 1035/3 ಎಂದು ನಂಬರನ್ನು ಕೊಟ್ಟಿರುತ್ತಾರೆಂದರೆ ಸಾಕ್ಷಿಯು ಅವರಿಗೆ ಅನುಕೂಲವಾಗುವಂತೆ ಪಂಚಾಯತಿಯಿಂದ ನಂಬರನ್ನು ಪಡೆದಿರುತ್ತಾರೆಂದು ನುಡಿಯುತ್ತಾರೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲಿಗಾಗಿ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

Sd/-
(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ